**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕ: 05-12-2023.</u>**

**<u>ಮುಂದುವರೆದ ಪಾಟೀ ಸವಾಲು: ವಾದಿ  ಪರ ಶ್ರೀ.ಆರ ಆರ ಕೆ ವಕೀಲರಿಂದ:</u>**

12. ಕಬ್ಬು ಬೆಳೆ ಬರಲು ಒಂದು ವರ್ಷಕ್ಕಿಂತ ಹೆಚ್ಚು  ಸಮಯ ಬೇಕಾಗುತ್ತದೆ. ದಾವಾ ಆಸ್ತಿಗಳಲ್ಲಿ ನನ್ನ ಹೆಸರಿನಲ್ಲಿ ಖರೀದಿ ಆದ ಎಲ್ಲಾ ಜಮೀನುಗಳು ಒಣ ಬೇಸಾಯ ಜಮೀನುಗಳು ಎಂದರೆ ನಿಜ. ನಾನು ಸಾಲವನ್ನು ಪಡೆದು ಸರ್ವೆ ನಂ.82/2 ಮತ್ತು 82/1 ಗಳ ಜಮೀನಿನಲ್ಲಿ  ಕೊಳವೆ ಬಾಂವಿ ಹಾಕಿಸಿದ್ದೇನೆ. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನಿಂದ ನಾನು ಸಾಲವನ್ನು ಪಡೆದಿದ್ದೆ. ಯಾವ ವರ್ಷದಲ್ಲಿ ಸದರಿ ಕೊಳವೆ ಬಾಂವಿಗಳನ್ನು ಹಾಕಿಸಿದ್ದೆ ನೆನಪಿಲ್ಲ. ನಿಡಿ.66 ಬೋರ ಹಾಕಿಸದೆ ನಾನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ ದಾಖಲೆ ಅಂದರೆ ಸರಿಯಲ್ಲ.  ನಿಡಿ.66 ರ ರಶೀದಿ ಮೇಲೆ ದಿ: 07-03-2006 ದಿನಾಂಕ ನಮೂದು ಇದೆ ಎಂದರೆ ನಿಜ. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನಿಂದ ಪಡೆದ ಸಾಲವು ಯಾವ ಜಮೀನಿನ ಕುರಿತು ಪಡೆಯಲಾಗಿದೆ ಎಂದು  ನಾನು ಹಾಜರುಪಡಿಸಿದ ನಿಡಿ.28 ರಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಜಮೀನಿನ ಕಾಗದ ಅವರು ಇಟ್ಟುಕೊಂಡೆ ಸಾಲ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ.  ದಿನಾಂಕ: 13.10.2006 ರಂದು ಸಣ್ಣ ನೀರಾವರಿಗಾಗಿ ಪಡೆದ ಸಾಲ ಎಂದು ಬರೆಯಲಾಗಿದೆ ಎಂದರೆ ನಿಜ.  ಸಾಲ ಪಡೆಯದೆ ಬೋರವೆಲ್ಲ ಹಾಕಿದ್ದೇನೆ ಎಂದು ಅದರ ರಶೀದಿ ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಮೊದಲು ಬೋರ ಹಾಕಿದ್ದೆ ನಂತರ ಸಾಲವನ್ನು ಪಡೆದಿದ್ದೆ

ಎಂದು ಹೇಳುತ್ತಾರೆ. 2 ನೇ ಬಾರಿ ಕೊಳವೆ ಬಾಂವಿ ಯಾವ ತರಹದ ಕೊಳವೆ ಬಾಂವಿ ಆಗಿತ್ತು ಎಂದು ಹೇಳಲು ಬರುವುದಿಲ್ಲ ಈಗ ನೆನಪಿಲ್ಲ. ಮೊದಲನೆ ಬಾರಿ ಹಾಕಿಸಿದ್ದ ಕೊಳವೆ ಬಾಂವಿ ಯಾವ ಕಂಪನಿಯವರಿಂದ ಹಾಕಿಸಿದ್ದೆ ಎಂದು ಹೇಳಲು ಬರುವುದಿಲ್ಲ ಈಗ ನೆನಪಿಲ್ಲ. ನಿಡಿ.29(1) ರಲ್ಲಿ ಜಮೀನುಗಳ ಸರ್ವೆ ನಂಬರ ಬರೆದಿಲ್ಲ ಎಂದರೆ ನಿಜ. ನಿಡಿ. 29(1)ರಲ್ಲಿ ಮೊಹರು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಇದೆ ಎಂದು ಹೇಳುತ್ತಾರೆ. ಕೊಳವೆ ಬಾಂವಿ ಹಾಕಿಸಿದ್ದೇನೆ ಎಂದು ರಶೀದಿಗಳನ್ನು ಸೃಷ್ಟಿ ಮಾಡಿಕೊಂಡು ಬಂದು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ.31 ಕೆಇಬಿ ಬಿಲ್ಲನಲ್ಲಿ ಆರ್ ಆರ್ ನಂಬರ ಇಲ್ಲ ಎಂದರೆ ಸಾಕ್ಷಿಯು ಕೆಇಬಿ ನವರಿಗೆ ಸಂಬಂಧಪಟ್ಟಿದ್ದು ಅವರಿಗೆ ಗೊತ್ತು ಎಂದು ಹೇಳುತ್ತಾರೆ. ನಿಡಿ.32 ರಿಂದ ನಿಡಿ.36 ರಲ್ಲಿ ಆರ್ ಆರ್ ನಂಬರ ಇಲ್ಲ ಎಂದರೆ ಸಾಕ್ಷಿಯು ಕೆಇಬಿ ನವರು ಕನೆಕ್ಷನ ಕೊಡುವ ಮುಂಚೆ ಹಣವನ್ನು ಜಮಾ ಮಾಡಿಸಿಕೊಳ್ಳುತ್ತಾರೆ ಅವು ನಿಡಿ.32 ರಿಂದ 36 ರಶೀದಿಗಳು ಎಂದು ಹೇಳುತ್ತಾರೆ. ನಾನು ನಿಡಿ.32 ರಿಂದ 36 ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

13. ನಾನು ಹಾಜರು ಮಾಡಿರುವ ನಿಡಿ.26 ಪಹಣಿಯಲ್ಲಿ ನೀರಾವರಿ ಮೂಲ ಬರೆದಿಲ್ಲ ಖುಷ್ಕಿ ಜಮೀನು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ನೀರಾವರಿ ಮೂಲ ಇಲ್ಲ ಆದರೆ ಪಕ್ಕದಲ್ಲಿ ಹಳ್ಳ ಇದೆ ಆದ್ದರಿಂದ ನೀರು ಪಡೆಯುತ್ತೇವೆ ಎಂದು ಹೇಳುತ್ತಾರೆ. ನನ್ನ ತಕರಾರಿನಲ್ಲಿ ಹಾಗೂ ಪ್ರಮಾಣ

ಪತ್ರದಲ್ಲಿ ಸದರಿ ಜಮೀನಿನ ಪಕ್ಕದಲ್ಲಿ ಹಳ್ಳ ಇದ್ದು ಜಮೀನಿಗೆ ಸದರಿ ಹಳ್ಳದ ನೀರು ಪೂರೈಕೆ ಆಗುತ್ತದೆ ಎಂದು ಬರೆಸಿಲ್ಲ. ನಿಡಿ.27 ರಲ್ಲಿ ನಮೂದಿಸಲಾದ ಜಮೀನು ಖುಷ್ಕಿ ಜಮೀನು ಎಂದರೆ ನಿಜ. ಸಾಕ್ಷಿಯು ಮಳೆ ಆಶ್ರಿತ ಜಮೀನು ಎಂದು ಹೇಳುತ್ತಾರೆ. ನನಗೆ ನನ್ನ ಹೆಸರಿನಲ್ಲಿ ಖರೀದಿ ಆಗಿರುವ ಜಮೀನುಗಳು ಚಕ್ಕಬಂದಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ವಾದಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುಡಲಾಯಿತು.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**